# ಶ್ರೀ ಮುರುಘಾಮಠದಲ್ಲಿ 7 ಜೋಡಿ ಸಾಮೂಹಿಕ ಕಲ್ಯಾಣ ಮಹೋತ್ಸವ

**ಚಿತ್ರದುರ್ಗ :** ಜೀವ ಜಗತ್ತಿನಲ್ಲಿ ಮಾನವನ ಮತಿ ಶ್ರೇಷ್ಠವಾದುದು. ಯಾರು ಸದಾ ಕಾಲ ಗತಿ ಮತ್ತು ಮತಿಯ ಬಗ್ಗೆ ಆಲೋಚಿಸುತ್ತಾರೋ ಅಂಥವರ ಬದುಕಿನಲ್ಲಿ ಪ್ರಗತಿಯನ್ನು ಕಾಣಲು ಸಾಧ್ಯ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಬಸವಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ) ಚಿತ್ರದುರ್ಗ ಇವರ ಸಹಯೋಗದಲ್ಲಿ ಮೂವತ್ತೆರಡನೆ ವರ್ಷದ ನಾಲ್ಕನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಗಳು, ಸಂಸಾರದಲ್ಲಿ ಸದ್ಗತಿ ಇದೆ ಎನ್ನುವುದನ್ನು ಸಾಧಿಸಿ, ಬೋಧಿಸಿದವರು 12ನೇ ಶತಮಾನದ ಬಸವಾದಿ ಶರಣರು. ಬ್ರಹ್ಮಾಂಡದಲ್ಲಿ ಲಕ್ಷೋಪಲಕ್ಷ ಜೀವರಾಶಿಗಳು ತಮ್ಮದೇ ಆದ ಜೀವನವನ್ನು ನಡೆಸುತ್ತಿವೆ. ಆದರೆ ಇತರ ಜೀವಿಗಳಿಗಿಂತ ಮಾನವನ ಮತಿ ಶ್ರೇಷ್ಠವಾದುದು. ಇದರಲ್ಲಿ ಎರಡು ವಿಧ. ಸುಮತಿ(ಸನ್ಮತಿ)- ಇದು ವ್ಯಕ್ತಿಯನ್ನು ಸನ್ಮಾರ್ಗದ ಕಡೆ ಕೊಂಡೊಯ್ಯುತ್ತದೆ. ಇನ್ನೊಂದು ದುರ್ಮತಿ- ಇದು ಮಾನವ ಬದುಕಿನ ಗತಿಯನ್ನು ನಾಶ ಮಾಡುತ್ತದೆ. ಸನ್ಮತಿಯು ವ್ಯಕ್ತಿಯ ಗತಿಯನ್ನು ಪ್ರಗತಿಯ ಕಡೆ ಕರೆದುಕೊಂಡು ಹೋಗುತ್ತದೆ. ದುರ್ಮತಿಯು ಮಾನವನನ್ನು ಅಧೋಗತಿಯತ್ತ ಕರೆದುಕೊಂಡು ಹೋಗುತ್ತದೆ. ಹಾಗಾಗಿ ಯಾವುದೇ ಸಂದರ್ಭದಲ್ಲು ನಾವು ಅಧೋಗತಿಗೆ ಇಳಿಯಬಾರದು ಎಂದು ನುಡಿದರು.

ಬನವಾಸಿ ಶ್ರೀ ಅಲ್ಲಮಪ್ರಭು ಹೊಳೆಮಠದ ಶ್ರೀ ನಾಗಭೂಷಣ ಸ್ವಾಮಿಗಳು ಮಾತನಾಡಿ, 12ನೇ ಶತಮಾನದ ಅನುಭವ ಮಂಟಪವನ್ನು ನಾವು ನೋಡಲು ಸಾಧ್ಯವಾಗಿಲ್ಲ. ಆದರೆ ಇಂದಿನ ವೈಭವೋಪೇತ ಅನುಭವ ಮಂಟಪದಲ್ಲಿ ವಧು-ವರರು ವಿವಾಹವಾಗುತ್ತಿರುವುದು ನಿಮ್ಮ ಭಾಗ್ಯ. ವಿವಾಹ ಕೇವಲ ಐಹಿಕ ಸುಖಕ್ಕಾಗಿ ಅಲ್ಲ. ಬಸವಾದಿ ಶರಣರು ಸಂಸಾರಿಗಳಾಗಿದ್ದರೂ ಈ ಲೋಕದ ಜೀವನವನ್ನು ದೇವಲೋಕಕ್ಕೆ ಸಮೀಕರಿಸಿದರು. ತಮ್ಮ ನಡೆ ನುಡಿಯ ಮೂಲಕ ಹೇಗೆ ಬದುಕಬೇಕೆಂಬುದನ್ನು ತೋರಿಸಿಕೊಟ್ಟರು. ಜೇಡರ ದಾಸಿಮಯ್ಯನವರು ವಿವಾಹವಾಗಲು ಮಾಡಿದ ಕನ್ಯಾನ್ವೇಷಣೆಯೇ ಕುತೂಹಲಕಾರಿಯಾದುದು. ಸಂಸಾರ ಜೀವನ ಲೋಕದ ಪವಿತ್ರ ಜೀವನ ಎಂಬುದನ್ನು ತಿಳಿಸಿಕೊಟ್ಟವರು ಶರಣರು. ಸಂಸಾರ ಜೀವನ ನಿಸ್ಸಾರ ಜೀವನವಾಗಬಾರದು ಎಂದು ಹಿತ ನುಡಿದರು.

ಕಾರ್ಯಕ್ರಮದಲ್ಲಿ 7 ಜೋಡಿಗಳ ವಿವಾಹ ನೆರವೇರಿತು. ಕಾರ್ಯಕ್ರಮದ ದಾಸೋಹಿಗಳಾದ ಸುರೇಶ್ ಬಾಫ್ನಾ ವೇದಿಕೆಯಲ್ಲಿದ್ದರು. ನಿಪ್ಪಾಣಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಎಸ್.ಕೆ. ಬಸವರಾಜನ್, ಎ.ಜೆ. ಪರಮಶಿವಯ್ಯ, ಸೊಂಡೇಕೊಳ ಶ್ರೀನಿವಾಸ್, ವಿನೋದ್ ಬಾಫ್ನಾ, ಸುರೇಶ್ ಬಾಫ್ನಾ, ಪೈಲ್ವಾನ್ ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಪರಶುರಾಮ ದೇವರು ಸ್ವಾಗತಿಸಿದರು. ಪ್ರಕಾಶ ದೇವರು ನಿರೂಪಿಸಿದರು.


ಮೂವತ್ತೆರಡನೇ ವರ್ಷ ನಾಲ್ಕನೇ ತಿಂಗಳ
ಮೂಹಿಕ ಕಲ್ಯಾಣ ಮಹೋತ್ಸವ


ಶ್ರೀ ಜಗದ್ಗುರು
ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ.) ಚಿತ್ರದುರ್ಗ
ತ್ತೆರಡನೇ ವರ್ಷ ನಾಲ್ಕನೇ ತಿಂಗಳ
ಕಲ್ಯಾಣ ಮಹೋತ್ಸವ
ಸಮಯ : ಬೆಳಗ್ಗೆ 10.30 ಸ್ಥಳ : ಅನುಭವ ಮಂಟಪ
ಶಿವಮೂರ್ತಿ ಮುರುಘಾ ಶರಣರು

